ಭದ್ರಾ ಮೇಲ್ದಂಡೆ ಯೋಜನೆ

೪೭೬. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಅಧಿವೇಶನದಲ್ಲಿ ಭದ್ರಾ ಮೇಲ್ದಂಡೆ ಯೋಜನೆಯನ್ನು ಸಿದ್ದಗೊಳಿಸಿ ೭ನೇ ಪಂಚ ವಾರ್ಷಿಕ ಯೋಜನೆಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವ ಆಶ್ವಾಸನೆಯನ್ನು ಸರ್ಕಾರದವರು ನೀಡಿದ್ದು ನಿಜವಲ್ಲವೆ,

ಆ) ಹಾಗಿದ್ದಲ್ಲಿ ಸದರೀ ಯೋಜನೆಗೆ ಎಷ್ಟು ಟಿ ಎಂ.ಸಿ. ನೀರು ಶೇಖರಣೆಯಾಗಿವೆ,

ಇ) ಭದ್ರಾ ಮೇಲ್ದಂಡೆಯಲ್ಲಿ ನೀರು ಶೇಖರಣೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಈ) ಹಾಗಿದ್ದಲ್ಲಿ, ಈ ಯೋಜನೆಯು ಕೆಲಸವು ಪ್ರಾರಂಭವಾಗದೆ ಇರಲು ಕಾರಣಗಳೇನು,

ಉ) ಮಾನ್ಯ ಮುಖ್ಯ ಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವ ಸಮಯದಲ್ಲಿ ಈ ಯೋಜನೆಯ ಬಗ್ಗೆ ತಜ್ಞರ ವರದಿಯನ್ನು ಪರಿಶೀಲನೆ ಮಾಡಿದ ನಂತರ ಮುಂದಿನ ಯೋಚನೆ ಮಾಡಲಾಗುವುದು ಎಂದು ಹೇಳಿಕೆ ಕೊಟ್ಟಿರುವುದು ನಿಜವಲ್ಲವೆ,

ಊ) ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ ಹಾಗೂ ಯಾವಾಗ ಮಾಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಕಾರ್ಯವು ಇನ್ನೂ ಪ್ರಾರಂಭವಾಗಿಲ್ಲವಾದುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಹೌದು.

ಊ) ಪರಿಶೀಲನೆಯಲ್ಲಿದೆ.

ಪ್ರವಾಸಿ ಮಂದಿರದ ದುರಸ್ತಿಯಲ್ಲಿ ಹಣದ ದುರುಪಯೋಗ

೪೭೭. ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ಮತ್ತು ೧೯೮೭-೮೮ಕ್ಕೆ ವಾಣಿ ವಿಲಾಸ ಸಾಗರದ ಬಳಿಯಿರುವ ಸಣ್ಣ ನೀರಾವರಿ ಇಲಾಖೆಯ ಪ್ರವಾಸಿ ಮಂದಿರದ ದುರಸ್ತಿಗೆ ಸರ್ಕಾರದವರು ಖರ್ಚು ಮಾಡಿರುವ ಹಣವೆಷ್ಟು ?

ಆ) ಸದರಿ ಕಾಮಗಾರಿಯನ್ನು ಇಲಾಖೆಯವರೇ ಮಾಡಿಸಿರುವರೆ ಇಲ್ಲವೆ, ಗುತ್ತಿಗೆಯವರಿಂದ ಮಾಡಿಸಲಾಗಿದೆಯೇ ?

ಇ) ಕಾಮಗಾರಿಯ ಉಸ್ತುವಾರಿ ಹೊತ್ತ ಕಿರಿಯ ಅಭಿಯಂತರು ಈ ಎರಡು ವರ್ಷಗಳಲ್ಲಿ ದುರಸ್ತಿ ಮಾಡಿಸಿದಂತೆ ಬಿಲ್ ಪಡೆದು ದುರಸ್ತಿಮಾಡದೇ ಇರುವುದು ಸರ್ಕಾರದ ಗಮನಕ್ಕೆಬಂದಿದೆಯೇ, ಹಾಗಿದ್ದಲ್ಲಿ ಅವರ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೬-೮೭ ಮತ್ತು ೧೯೮೭-೮೮ರ ಸಾಲಿನಲ್ಲಿ ವಾಣಿವಿಲಾಸ ಸಾಗರದ ಬಳಿ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ ಪ್ರವಾಸಿ ಮಂದಿರದಲ್ಲಿ ಯಾವ ದುರಸ್ತಿ ಕಾರ್ಯಗಳು ಕೈಗೊಳ್ಳಲಾಗಿಲ್ಲ.

ಆ) ಮತ್ತು (ಇ). 'ಅ' ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.